ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು.  ದಿನಾಂಕ : 31.10.2025.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರಃ   ವಕೀಲರಿಂದಃ**

ಆರೋಪಿತನ ವಿರುದ್ದ ದಾಖಲಿಸಿದ ಚೆಕ್ಕು ಕಂಪನಿಯ ಚೆಕ್ಕು ಅಂದರೆ ಸರಿ. ನಾನು ಕಂಪನಿಯನ್ನು ಈ ಪ್ರಕರಣದಲ್ಲಿ ಪಾರ್ಟಿ ಮಾಡಿರುತ್ತೇನೆ. ನಾನು ಕಂಪನಿಯ ಹೆಸರಿಗೆ ನೋಟಿಸ ಜಾರಿ ಮಾಡಿರುತ್ತೇನೆ. ನಾನು ಕಂಪನಿಗೆ ನೋಟಿಸ ಜಾರಿ ಮಾಡಿಲ್ಲಾ ಅಂದರೆ ಸರಿಯಲ್ಲಾ. ನಾನು ಕಂಪನಿಯನ್ನು ಸಹ ಪಾರ್ಟಿ ಮಾಡಿಲ್ಲಾ ಅಂದರೆ ಸರಿಯಲ್ಲಾ. ನಮ್ಮ ಬಳಿ ಇಬ್ಬರೂ ಆರೋಪಿತರು ಬಂದು ಹಣ ಕೇಳಿರುತ್ತಾರೆ. ಮೊದಲು ವ್ಯವಹಾರ ಇಬ್ಬರು ಆರೋಪಿತರ ಜೊತೆಗೆ ಮಾಡಿರುತ್ತೇನೆ. ಆರೋಪಿತರ ಜೊತೆಗೆ ಪ್ರಥಮ ಬಾರಿಗೆ 2 ವರ್ಷದ ಹಿಂದೆ ವ್ಯವಹಾರ ಮಾಡಿರುತ್ತೇನೆ. ನಾನು ಇಬ್ಬರೂ ಆರೋಪಿತರ ಜೊತೆಗೆ ವ್ಯವಹಾರ ಮಾಡಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಮೊದಲಬಾರಿಗೆ ಏಷ್ಟು ಹಣದ ವ್ಯವಹಾರ ಮಾಡಿದ್ದೇನೆ ಅಂತಾ ಹೇಳಲು ಬರುವುದಿಲ್ಲಾ. ಸಾಕ್ಷಿ ಮುಂದುವರೆದು 1 ಲಕ್ಷ ಈ ರೀತಿ ಸ್ವಲ್ಪ ಸ್ವಲ್ಪ ಹಣ ಪಡೆದುಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಮೊದಲಬಾರಿಗೆ ಆರೋಪಿತರು ನಮ್ಮ ಜೊತೆಗೆ ವ್ಯವಹಾರ ಮಾಡಿದಾಗ 2 ಚೆಕ್ಕುಗಳನ್ನು ಭದ್ರತೆಗಾಗಿ ನಾನು ಪಡೆದಿದ್ದೆ ಅಂದರೆ ಸರಿಯಲ್ಲಾ. ನಾವು ವ್ಯವಹಾರ ಹೆಚ್ಚಾಗಿ ಬ್ಯಾಂಕಿನ ಮೂಲಕ ಮಾಡುತ್ತೇವೆ ಅಂದರೆ ಸರಿ. ಬೇಕಾದಾಗ ಕೈಗಡ ಸಹ ಕೊಡುತ್ತಿದ್ದೇವು ಎಂದು

ನುಡಿಯುತ್ತಾರೆ. ಆರೋಪಿತರ ಖಾತೆಗೆ ನಾನು ಹಣ ವರ್ಗಾವಣೆ ಮಾಡಲು ತೊಂದರೆ ಇರಲಿಲ್ಲಾ ಆದರೆ ಕೈಗಡ ಹಣ ಕೊಟ್ಟಿದ್ದೇನೆ ಆದರೆ ಬ್ಯಾಂಕಿನಿಂದ ಕೊಡಲು ಬರುವುದಿಲ್ಲಾ ಎಂದು ನುಡಿಯುತ್ತಾರೆ. ಆರೋಪಿತರು ಬ್ಯಾಂಕಿನ ಮೂಲಕ ನಮಗೆ ಎಷ್ಟು ಹಣ ಪಾವತಿಸಿದ್ದಾರೆ ಅಂತಾ ಹೇಳಲು ಬರುವುದಿಲ್ಲಾ. ದಿಃ 19.06.2023 ರಂದು ನನ್ನ ಕೆನರಾ ಬ್ಯಾಂಕ ಖಾತೆಗೆ ಆರೋಪಿತರು ರೂ.2 ಲಕ್ಷ ಹಣ ಜಮಾ ಮಾಡಿದ್ದಾರೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಹಣ ಮೆಣಸಿನಕಾಯಿ ತೆಗೆದುಕೊಂಡು ಪಾವತಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ–01 ಎಂದು ಗುರುತಿಸಲಾಯಿತು.

ದಿಃ 13.12.2023 ರಂದು ನನ್ನ ಮಗನ ಖಾತೆಗೆ ರೂ.76,853/– ಹಣ ಹಾಕಿದ್ದಾರೆ ಅಂದರೆ ಅವರ ವ್ಯವಹಾರ ನನಗೆ ಸಂಬಂದ ಇಲ್ಲಾ ಎಂದು ನುಡಿಯುತ್ತಾರೆ. ಆರೋಪಿತನಿಗೆ ರೂ.7 ಲಕ್ಷ ಕೊಟ್ಟ ಬಗ್ಗೆ ಯಾವುದೇ ಬೇರೆ ದಾಖಲೆ ಪಡೆದಿರುವುದಿಲ್ಲಾ. ನಿಪಿ–08 ನ್ನು ನಾವೇ ತಯಾರಿಸುತ್ತೇವೆ ಅಂದರೆ ಸರಿ. ನಿಪಿ–08 ರ ಮೇಲೆ ಆರೋಪಿತರ ಸಹಿ ಅಥವಾ ಕಂಪನಿಯ ಸೀಲು ಇಲ್ಲಾ ಅಂದರೆ ಸರಿ. ಸಾಮಾನ್ಯವಾಗಿ ವ್ಯವಹಾರ ಮಾಡಿದರೆ ಇಬ್ಬರ ಸಹಿಯೂ ಇರುತ್ತದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಪಟ್ಟಿ ಮಾಡಿ ಕೊಟ್ಟು ಕಳುಹಿಸಿರುತ್ತೇವೆ ಎಂದು ನುಡಿಯುತ್ತಾರೆ. ದಿಃ 23.05.2024 ರಂದು 156 ಚೀಲ ಮೆಣಸಿನಕಾಯಿ ಆರೋಪಿತರಿಗೆ ಕೊಟ್ಟಿರುತ್ತೇನೆ. ಒಂದು ಚೀಲದಲ್ಲಿ ಎಷ್ಟು ಮೆಣಸಿನಕಾಯಿ ಇರುತ್ತದೆ ಅಂತಾ ಅಂದಾಜು ಗೊತ್ತಾಗುವುದಿಲ್ಲಾ. ಸದರಿ ಮೆಣಸಿನಕಾಯಿ 1 ಕೆ.ಜಿ.ಗೆ ಎಷ್ಟು

ಹಣ ಅಂತಾ ಹೇಳಲು ಬರುವುದಿಲ್ಲಾ. ನಿಪಿ–09 ಬಿಲ್ಲನ್ನು ಸಹ ನಾವೇ ತಯಾರಿಸಿದ್ದೇವೆ ಅಂದರೆ ಸರಿ. ನಿಪಿ–12 ರಲ್ಲಿ ಆರೋಪಿತರ ಹೆಸರು ಅಥವಾ ಕಂಪನಿಯ ಹೆಸರು ಇಲ್ಲಾ ಅಂದರೆ ಸರಿಯಲ್ಲಾ. ದಿಃ 23.05.2024 ರಂದು ನಾವು ಎ ಪಿ ಎಂ ಸಿ ಯಲ್ಲಿ ಮಾಡಿದ ವ್ಯವಹಾರದ ಸಂಬಂಧ ಬಿಲ್ಲು ಇರುತ್ತದೆ ಎಂದರೆ ಸರಿ. ನಿಪಿ–11 ಇದು ಓ ಡಿ ಖಾತಾ ವಿವರ ಎಂದರೆ ಸರಿ. ನಾನು ನಿಪಿ–11 ಪ್ರಕಾರ 60 ಲಕ್ಷ ಸಾಲ ಪಡೆದಿರುತ್ತೇನೆ. ನಮ್ಮ ಅವಶ್ಯಕತೆಗೊಸ್ಕರ ನಿಪಿ–11 ರ ಪ್ರಕಾರ ಸಾಲ ಪಡೆದಿದ್ದೇನೆ ಅಂದರೆ ಸರಿ. ಸದರಿ ಖಾತೆಯಲ್ಲಿಯ ಹಣ ನಮ್ಮ ಅವಶ್ಯಕತೆಗೆ ಮಾತ್ರ ತೆಗೆಯುವುದು ಎಂದರೆ ಸಾಕ್ಷಿಯು ಕೈಗಡ ಹಣ ಬೇಡಿದಾಗ ತೆಗೆದುಕೊಡುತ್ತೇವೆ ಎಂದು ನುಡಿಯುತ್ತಾರೆ. ನಿಪಿ–11 ರ ಪ್ರಕಾರ ಎಷ್ಟು ಸಾಲ ಇದೆ ಅಂತಾ ಹೇಳಲು ಬರುವುದಿಲ್ಲಾ. ಆದರೆ ಸಾಲ ಇರುತ್ತದೆ. ನಿಪಿ–08 ರಿಂದ 10 ದಾಖಲೆಗಳನ್ನು ಈ ಪ್ರಕರಣಕ್ಕೆ ಅನುಕುಲವಾಗಲು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲಾ. ನಿಪಿ–10 ನ್ನು ಸಹ ನಾವೇ ತಯಾರಿಸಿದ ಬಿಲ್ಲು ಎಂದರೆ ಸರಿ. ನಿಪಿ–01 ರಲ್ಲಿ ಇರುವ ಅಂಕಿ ಮತ್ತು ಅಕ್ಷರದ ಬರವಣಿಗೆ ಬೇರೆ ಬೇರೆ ಇದೆ ಎಂದರೆ ಸಾಕ್ಷಿಯು ಅವರೇ ಬರೆಯಿಸಿಕೊಟ್ಟಿರುತ್ತಾರೆ ಯಾರ ಕಡೆಯಿಂದ ಬರೆಸಿಕೊಟ್ಟಿರುತ್ತಾರೆ ಅಂತಾ ನನಗೆ ಗೊತ್ತಿಲ್ಲಾ. ಬೇರೆ ಬೇರೆ ಇದ್ದ ಬಗ್ಗೆ ನನಗೆ ಹೇಳಲು ಆಗುವುದಿಲ್ಲಾ. ನಿಪಿ–01 ರ ಮೇಲೆ ನಾನೇ ಸಹಿ ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲಾ. ನಿಪಿ–01 ರಲ್ಲಿಯ ದಿನಾಂಕ ಮತ್ತು ಮೊತ್ತ ಬೇರೆ ಬೇರೆ ಪೇನ್ನಿನಿಂದ ಬರೆಯಲಾಗಿದೆ ಅಂದರೆ ಸರಿಯಲ್ಲಾ. ಆರೋಪಿತರು ನಿಪಿ–

01 ನ್ನು ತಮ್ಮ ಊರಿನಲ್ಲಿ ನೀಡಿರುತ್ತಾರೆ. ನಿಪಿ–01 ನ್ನು ಆರೋಪಿತರು ತಮ್ಮ ಮನೆಯಲ್ಲಿ ನೀಡಿರುತ್ತಾರೆ. ನಿಪಿ–01 ನ್ನು ದಿಃ 13.12.2024 ರಂದು ನೀಡಿರುತ್ತಾರೆ. ನಿಪಿ–01 ರ ಮೇಲೆ ದಿನಾಂಕ ನಮೂದಿಸಿ ಕೊಟ್ಟಿರುವುದಿಲ್ಲಾ. ಸಾಕ್ಷಿ ಮುಂದುವರೆದು ನಿಪಿ–01 ರ ಮೇಲೆ ದಿನಾಂಕ ನಮೂದಿಸಿ ಕೊಟ್ಟಿದ್ದು 2 ದಿನ ಬಿಟ್ಟು ನಗದೀಕರಣಕ್ಕಾಗಿ ಹಾಕಲು ಹೇಳಿರುತ್ತಾರೆ. ನಾನು ನಗದೀಕರಣಕ್ಕೆ ಅವರು ಹೇಳಿದ ಮೇಲೆ ಹಾಕಿರುತ್ತೇನೆ. ಆರೋಪಿತರು ತಮ್ಮ ಮನೆಯಲ್ಲಿ ಆ ದಿನ ಚೆಕ ನೀಡಿಲ್ಲಾ ಅಂದರೆ ಸರಿಯಲ್ಲಾ. ನಿಪಿ–01 ಮತ್ತು ಇನ್ನೊಂದು ಚೆಕ ನಂಬರ 000381 ನೇದ್ದನ್ನು ಮೊದಲಬಾರಿಗೆ ವ್ಯವಹಾರ ಮಾಡಿದಾಗ ಆರೋಪಿತರು ನಮಗೆ ನೀಡಿರುತ್ತಾರೆ ಎಂದರೆ ಸರಿಯಲ್ಲಾ. ಆರೋಪಿತರು ಭದ್ರತೆಗಾಗಿ ಕೊಟ್ಟ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲಾ. 2023 ರ ನಂತರ ಆರೋಪಿತರು ನಮ್ಮ ಬಳಿ ಯಾವುದೇ ವ್ಯವಹಾರ ಮಾಡದೆ ಇರುವುದರಿಂದ ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತರು ರೂ.7 ಲಕ್ಷ ಕೈಗಡ ಹಣ ಮತ್ತು ರೂ. 5 ಲಕ್ಷ ಬಿಲ್ ಹಣ ಎರಡೂ ಸೇರಿ ಒಂದು ತಿಂಗಳ ನಂತರ ಕೊಡುತ್ತೇನೆ ಅಂತಾ ಹೇಳಿರುತ್ತಾರೆ. ಆರೋಪಿತರು ನಮ್ಮ ಹತ್ತಿರ ಯಾವುದೇ ಹಣ ಪಡೆಯದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ವಿನಾಯಕ ಬಸವರಾಜ ಕಂಬಳಿ ನನ್ನ ಮಗ ಅಂದರೆ ಸರಿ. ನನ್ನ ಮಗನು ಸಹ ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿದ್ದಾನೆ ಅಂದರೆ ಸರಿ. ಆರೋಪಿತರ ವಿರುದ್ಧ ನನ್ನ ಮಗ ದಾಖಲಿಸಿದ

ದಾಖಲೆ ಇದೆ ಅಂತಾ ತೋರಿಸಲಾಗಿ ಅದನ್ನು ನಿರಾಕರಿಸಿರುತ್ತಾರೆ. ಸದರಿ ದಾಖಲೆಯಲ್ಲಿ ನನ್ನ ಮಗನ ಹೆಸರು ಇದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-02 ಎಂದು ಒಟ್ಟಾರೆಯಾಗಿ ಗುರುತಿಸಲಾಯಿತು. ನಾನು ಆರೋಪಿತರಿಗೆ ಹಣ ಕೊಟ್ಟಿದ್ದೇನೆ ಎನ್ನುವ ಸಂಗತಿ ನನ್ನ ಮಗನಿಗೂ ಗೊತ್ತಿತ್ತು ಎಂದರೆ ಸರಿ. ನನ್ನ ಮಗ ನನಗಿಂತ ಮೊದಲು ಆರೋಪಿತರಿಗೆ ಹಣ ಕೊಟ್ಟಿದ್ದೇನೆ ಅಂತಾ ಪ್ರಕರಣ ದಾಖಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲಾ. ನಾನು ಮತ್ತು ನನ್ನ ಮಗ ಆರೋಪಿತರು ಕೊಟ್ಟ ಭದ್ರತೆಗಾಗಿ ಕೊಟ್ಟ 2 ಚೆಕ್ಕುಗಳನ್ನು ಇಬ್ಬರೂ ಬೇರೆ ಬೇರೆ ಪ್ರಕರಣಗಳನ್ನು ದಾಖಲಿಸಿದ್ದೇವೆ ಅಂದರೆ ಸರಿಯಲ್ಲಾ. ನಾನು ಒಂದು ವೇಳೆ ಹಣ ಕೊಟ್ಟಿದ್ದರೆ ನನ್ನ ಮಗ ಪ್ರಕರಣ ದಾಖಲಿಸುತ್ತಿರಲಿಲ್ಲಾ ಅಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ನನ್ನ ಮಗನ ಪ್ರಕರಣ ಬೇರೆ ಎಂದು ನುಡಿಯುತ್ತಾರೆ. ಆರೋಪಿತರು ನನ್ನ ಕಡೆಯಿಂದ ರೂ.7 ಲಕ್ಷ ಹಣ ಪಡೆಯುವ ಪ್ರಸಂಗ ಬಂದಿರಲಿಲ್ಲಾ ಅಂದರೆ ಸರಿಯಲ್ಲಾ. ನಾನು ಬ್ಯಾಂಕಿನಲ್ಲಿ ಸಾಲ ಮಾಡಿ ಆರೋಪಿತರಿಗೆ ಹಣ ಕೊಡಲು ಶಕ್ಯ ಇಲ್ಲಾ ಅಂದರೆ ಸರಿಯಲ್ಲಾ. ನಾನು ಆದಾಯ ತೆರಿಗೆ ಭರಣ ಮಾಡುತ್ತೇನೆ. ಸದರಿ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ. ಕಾನೂನಿನ ಅಡಿಯಲ್ಲಿ ರೂ.20 ಸಾವಿರಕ್ಕಿಂತ ಹೆಚ್ಚಿಗೆ ಕೈಗಡವಾಗಿ ಕೊಡಬಾರದು ಅಂತಾ ಇದೆ ಎಂದರೆ ನನಗೆ ಗೊತ್ತಿಲ್ಲಾ. ನನಗೆ ಸಂಪೂರ್ಣ ಈ ಬಗ್ಗೆ ಜ್ಞಾನ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಾನು ಪಡಿತರ ಚೀಟಿ ಹೊಂದಿರುತ್ತೇನೆ. ಸದರಿ ಪಡಿತರ ಚೀಟಿಯಿಂದ ಅಕ್ಕಿ ಕೊಡುವುದಿಲ್ಲಾ. ನಾನು ಹೊಂದಿರುವ

ಪಡಿತರ ಚೀಟಿ ಯಾವುದು ಅಂತಾ ನನಗೆ ಹೇಳಲು ಬರುವುದಿಲ್ಲಾ. ನನ್ನ ಮನೆಯವರಿಗೆ ಸರ್ಕಾರದಿಂದ ಬಾಗ್ಯಲಕ್ಷ್ಮೀ ಹಣ ಬರುತ್ತದೆ ಅಂದರೆ ಸರಿಯಲ್ಲಾ. ಆರೋಪಿತನು ರೂ.5,53,868/- ಮೆಣಸಿನಕಾಯಿ ನನ್ನ ಕಡೆಯಿಂದ ಪಡೆದಿಲ್ಲಾ ಅಂದರೆ ಸರಿಯಲ್ಲಾ. ರೂ.7 ಲಕ್ಷ ಮತ್ತು ಮೆಣಸಿನಕಾಯಿಯ ಹಣ ರೂ.12,53,868/- ದಿಃ15.05.2024 ರ ಒಳಗೆ ಕೊಡುತ್ತೇನೆ ಅಂತಾ ಒಪ್ಪಿಕೊಂಡಿರುತ್ತಾನೆ ಅಂತಾ ಬರೆಸಿರುತ್ತೇನೆ ಅಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಆದೇಶಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸರಿ ಅದೆ.

Sd/-

ಜೆಎಂಎಫ್‌ಸಿ, ಬ್ಯಾಡಗಿ.